ಶ್ರೀ ಆರ್. ರಾಮಯ್ಯ.—ಇದು ಬಹಳ ಗಹನವಾದ ವಿಷಯವಾದುದರಿಂದ, ಈ ದಿನವೇ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು.—ಇವತ್ತು ಮಧ್ಯಾಹ್ನ ಅಥವಾ ನಾಳೆ ತೆಗೆದುಕೊಳ್ಳೋಣ.

ಗಮನ ಸೆಳೆಯುವ ಸೂಚನೆ

ಬಿತ್ತನೆ ಬೀಜಗಳನ್ನು ಖರೀದಿಸುವ ಬೆಲೆ ಹಾಗೂ ಮಾರುವ ಬೆಲೆಯಲ್ಲಿರುವ ವ್ಯತ್ಯಾಸವನ್ನು ಸರಿಪಡಿಸುವುದು.

ಶ್ರೀ ಸಿ. ಎಂ. ಉದಾಸಿ.—ಮಾನ್ಯ ಅಧ್ಯಕ್ಷರೆ, ಬಿತ್ತನೆ ಬೀಜ ಖರೀದಿಯಲ್ಲಿನ ಅಂತರದ ಬಗ್ಗೆ ಮಾನ್ಯ ಕೃಷಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಸಚಿವರು).—ಬಿತ್ತನೆ ಬೀಜ ಖರೀದಿ ದರಗಳನ್ನು ನಿಗದಿಪಡಿಸಲು ನಿಗಮದ ಮಂಡಳಿಯು ಒಂದು ಉಪ ಸಮಿತಿ ಯನ್ನು ನಿಯಮಿಸಿದೆ. ಈ ಉಪ ಸಮಿತಿಯು ಮಾಡುವ ಶಿಫಾರಸ್ಸಿನ ಆಧಾರದ ಮೇಲೆ ಖರೀದಿ ದರಗಳನ್ನು ನಿಗದಿಪಡಿಸಲಾಗುವುದು.

ಬೀಜ ಖರೀದಿ ದರಗಳನ್ನು ನಿಗಧಿಪಡಿಸಲು ಬೀಜೋತ್ಪಾದನೆಗೆ ತಗಲುವ ವೆಚ್ಚವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಇದಲ್ಲದೇ ಇತರೇ ಸರ್ಕಾರಿ ಹಾಗೂ ಖಾಸಗಿ ಬೀಜೋತ್ಪಾದನಾ ಸಂಸ್ಥೆಗಳು ರೈತರಿಗೆ ಬೀಜ ಖರೀದಿ ಮಾಡಲು ನೀಡುವ ಬೆಲೆಯನ್ನು ಸಹಾ ಗಣನೆಗೆ ತೆಗೆದುಕೊಳ್ಳಲಾಗುವುದು. ನಿಗಮವು ಮಾರಾಟ ದರವನ್ನು ನಿಗದಿಪಡಿಸುವಾಗ ಖರೀದಿ ವೆಚ್ಚ ಮತ್ತು ಇನ್ನಿತರೆ ವೆಚ್ಚಗಳನ್ನು ಗಣನೆಗೆ ತೆಗೆದುಕೊಳ್ಳುವುದು ಅನಿವಾರ್ಯ.

ಖಾಸಗಿ ಸಂಸ್ಥೆಗಳಂತೆ ತನ್ನ ಕಾರ್ಯಕ್ರಮಗಳನ್ನು ಕೇವಲ ಲಾಭದಾಯಕ ಹಾಗೂ ಹೆಚ್ಚಿನ ಬೇಡಿಕೆಯುಳ್ಳ ತಳಿಗಳ ಬೀಜ ಉತ್ಪಾದನೆ ಮತ್ತು ಮಾರಾಟಕ್ಕೆ ಸೀಮಿತಗೊಳಿಸದೇ ಕರ್ನಾಟಕ ರಾಜ್ಯ ಬೀಜ ನಿಗಮವು ಸೇವಾ ಮನೋಭಾವದ ದೃಷ್ಟಿಯಿಂದ ರೈತರಿಗೆ ಬೇಕಾಗುವ ಎಲ್ಲಾ ಬೀಜಗಳನ್ನು ಉತ್ಪಾದಿಸಿ ಮಾರಾಟ ಮಾಡುತ್ತದೆ.

ಬೀಜೋತ್ಪಾದನೆ ಮಾಡಿದಂತಹ ರೈತರಿಗೆ ಶೀಘ್ರವಾಗಿ ಹಣವನ್ನು ದೊರಕುವಂತೆ ಏರ್ಪಾಡು ಮಾಡಲಾಗಿದೆ. ರೈತನು ಬೀಜೋತ್ಪಾದನಾ ಕಾರ್ಯಕ್ರಮದಲ್ಲಿ ಉತ್ಪಾದಿಸಿದಂತಹ ದ್ವಿದಳ ಧಾನ್ಯ ಮತ್ತು ಏಕದಳ ಧಾನ್ಯ ಬಿತ್ತನೆ ಬೀಜಗಳನ್ನು ಸಂಸ್ಕರಿಸಿದ ತಕ್ಷಣವೇ ಶೇಕಡ ೮೦ರಷ್ಟು ಹಣವನ್ನು ಕೊಡಲಾಗುತ್ತದೆ. ಇಂತಹ ಬೀಜವನ್ನು ಪ್ರಮಾಣೀಕರಿಸಿದ ನಂತರ ಉಳಿದ ಶೇಕಡ ೨೦ರಷ್ಟು ಹಣ ವನ್ನು ಕೊಡಲಾಗುತ್ತದೆ.

ಸಂಕೀರ್ಣ (Hybrid Crops) ಬೆಳೆಗಳ ಬೀಜಗಳಿಗೆ ಬೀಜ ಪ್ರಮಾಣಿಸಿದ ಕೂಡಲೇ ಪೂರ್ತಿ ಹಣವನ್ನು ಕೊಡಲಾಗುತ್ತದೆ.

† ಶ್ರೀ ಸಿ. ಎಂ. ಉದಾಸಿ.—ಮಾನ್ಯ ಅಧ್ಯಕ್ಷರೆ, ಗೋವಿನ ಜೋಳವನ್ನು ೨೫೦ ರೂಪಾಯಿಗೆ ಕೊಂಡು, ೬೦೦ ರೂಪಾಯಿಗೆ ಮಾರಾಟ ಮಾಡಿದ್ದಾರೆ. ಜಯ ಭತ್ತವನ್ನು ೨೫೦ ರೂಪಾಯಿಗೆ ಕೊಂಡು, ೪೫೦ ರೂಪಾಯಿಗೆ ಮಾರಾಟ ಮಾಡಿದ್ದಾರೆ, ಸೂರ್ಯಕಾಂತಿ ಬೀಜವನ್ನು ೯೦೦ ರೂಪಾಯಿಗೆ ಕೊಂಡು, ೧೫೦೦ ರೂಪಾಯಿಗೆ ಮಾರಾಟ ಮಾಡಿದ್ದಾರೆ. ಮಧ್ಯವರ್ತಿಗಳು ಕಮೀಷನ್ ಮೇಲೆ ಕೊಂಡರೆ ಶೋಷಣೆ ಎಂದು ಹೇಳಬಹುದು. ಸರ್ಕಾರಿ ಸಂಸ್ಥೆ ರೈತರಿಂದ ಖರೀದಿ ಮಾಡುವಂಥ ಸಂದರ್ಭದಲ್ಲಿ ಆಗುತ್ತಿರುವ ಅಂತರವನ್ನು ಸರಿಪಡಿಸಲಿಕ್ಕೆ ಮಾನ್ಯ ಸಚಿವರು ಕ್ರಮ ತೆಗೆದು ಕೊಳ್ಳುವರೇ ?

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ಹೈಬ್ರಿಡ್ ಮೈಜ್ ೩೦೦ ರೂಪಾಯಿಗೆ ಖರೀದಿ ಮಾಡಿ ೪೨೫ರಿಂದ ೫೪೦ ರೂಪಾಯಿಗೆ ಮಾರಾಟ ಮಾಡುತ್ತಿದ್ದೇವೆ. ತಾವು ಹೇಳಿದಂತೆ ೬೦೦

†ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ರೂಪಾಯಿ ಅಲ್ಲ. ಅದೇ ಪ್ರಕಾರ ಜಯಭತ್ತ, ೨೬೦ರಿಂದ ೨೫೦ ರೂಪಾಯಿ ಮಾರಾಟ ಇದೆ, ತಾವು ಹೇಳಿದಂತೆ ೪೫೦ ರೂಪಾಯಿ ಅಲ್ಲ, ನನ್ನ ಸದಸ್ಯ ಮಿತ್ರರು ಹೇಳಿದ್ದು ನಿಜ, ೩೦೦ ರೂಪಾಯಿಗೆ ತೆಗೆದುಕೊಂಡು ೫೦೦ ರೂಪಾಯಿಗೆ ಮಾರಾಟ ಮಾಡುತ್ತಿದ್ದಾರೆ ಎಂದು ಹೇಳಿದರೆ, ಅದಕ್ಕೆ ಟ್ರಾನ್ಸ್ಪೋರ್ಟ್, ಗನ್ನಿಬ್ಯಾಗ್ ಪ್ಯಾಕಿಂಗ್, ವೇಸ್ಟೇಜ್, ಅಡ್ಮಿನಿಸ್ಟ್ರೇಟೀವ್ ಕಾಸ್ಟ್, ಇಂಟರೆಸ್ಟ್ ಇದೆಲ್ಲವೂ ಇದರಲ್ಲಿ ಬರುತ್ತದೆ, ಕಂಪ್ಯಾರಿಟೀವ್ ಸ್ಟೇಟ್‌ಮೆಂಟ್ ಕೊಡುತ್ತೇನೆ. ಇದೇ ವರ್ಷ ಇವೊತ್ತು ಹೈಬ್ರಿಡ್ ಪವಾರ್ ನಮ್ಮ ರಾಷ್ಟ್ರೀಯ ಸೀಡ್ ಕಾರ್ಪೊರೇಷನ್ ಈ ವರ್ಷ, ೧,೦೦೦ ರೂಪಾಯಿನಿಂದ ೧೪೬೦ ರೂಪಾಯಿಗಳವರೆಗೆ ಮಾರಾಟ ಮಾಡುತ್ತಿದೆ. ನಮ್ಮ ರೇಟು ೯೦೦ ರೂಪಾಯಿ ಇದೆ. ಹೈಬ್ರಿಡ್ ಮೇಜ್ ಅವರು ೬೦೦ ರೂಪಾಯಿಗೆ ಮಾರಾಟ ಮಾಡುತ್ತಿದ್ದಾರೆ, ನಾವು ೪೨೦ರಿಂದ ೪೪೦ ರೂಪಾಯಿಗೆ ಮಾರಾಟ ಮಾಡುತ್ತಿದ್ದೇವೆ. ಅದೇ ಪ್ರಕಾರ ಹೈಬ್ರಿಡ್ ಸನ್‌ಫ್ಲವರ್ ೩,೨೦೦ ರೂಪಾಯಿ ಇದೆ, ನಾವು ೪,೦೦೦ ರೂಪಾಯಿಗೆ ಮಾರಾಟ ಮಾಡುತ್ತಿದ್ದೇವೆ ಬೇರೆ ಯಾವುದೇ ಕಂಪನಿ ತೆಗೆದುಕೊಂಡರೂ ಪ್ರೈವೇಟ್ ಏಜೆನ್ಸಿ ರೇಟಿಗಿಂತಲೂ ಕಡಿಮೆ ಇದೆ. ಆದರೂ ಸಹ ಎರಡು ಮೂರು ಸಾರಿ ಮಿಟಿಂಗ್ ಮಾಡಿ ಈ ಸಮಸ್ಯೆ ಏನಿದೆ ಇದರ ಬಗ್ಗೆ ರೈತರಿಗೆ ಸರಿಸಮಯದಲ್ಲಿ ಒಳ್ಳೆಯ ಬೀಜ ಸಿಗಬೇಕು, ಯೋಗ್ಯ ದರದಲ್ಲಿ ಸಿಗಬೇಕೆಂದು ನಮ್ಮ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಕಾಸ್ಟ್ ಷೀಟ್ ಸ್ಟಡಿ ಮಾಡಿ ವರದಿ ಕೊಡಲಿಕ್ಕೆ ಹೇಳಿದ್ದೇವೆ.

ಶ್ರೀ ಸಿ. ಎಂ. ಉದಾಸಿ.— ಅಧ್ಯಕ್ಷರೆ, ವೇಸ್ಟೇಜ್ ಪ್ರಶ್ನೆ ಇದರಲ್ಲಿ ಬರುವುದಿಲ್ಲ. ಇವರು ಒಟ್ಟು ಉತ್ಪಾದನೆ ಮಾಡಿದ್ದರಲ್ಲಿ ಸೀಡ್ ಸರ್ಟಿಫೈ ಆದಂಥ ಸೀಡ್ಸ್‌ಗಳಿಗೆ ಮಾತ್ರ ಆ ಬೆಲೆ ಕೊಡಬೇಕಾಗಿ ಬರುತ್ತದೆ. ಈ ರೀತಿ ನೀವು ಏಸ್ಟಾಬ್ಲಿಷ್‌ಮೆಂಟ್ ಚಾರ್ಜ್ ಎಕ್ಸ್‌ಪೆಂಡಿಚರ್ ಇವರಿಂದ ವಸೂಲು ಮಾಡುವ ಪರಿಸ್ಥಿತಿ ಬಂದರೆ ಹೇಗೆ ? ರೈತರು ಬೆಳೆದು, ರೈತರು ಕೊಳ್ಳುವಂಥ ಪರಿಸ್ಥಿತಿ ಇದ್ದಾಗ ಅವರಿಂದ ಖರೀದಿ ಮಾಡುವಂತಾದ್ದಕ್ಕೂ ಮತ್ತು ಮಾರಾಟ ಮಾಡುವಂತಾದ್ದಕ್ಕೂ ಕ್ವೆಂಟೋಲ್‌ಗೆ ೧೦೦–೨೦೦ ರೂಪಾಯಿ ವ್ಯತ್ಯಾಸ ಆದರೆ ಹೇಗೆ ? ಇಲ್ಲಿ ಕೇಂದ್ರ ಸರ್ಕಾರದವರು ಮಾಡುತ್ತಾರೆ, ಕೇಂದ್ರ ನಿಗಮದವರು ಮಾಡುತ್ತಾರೆ, ಬೇರೆಯವರು ಮಾಡುತ್ತಾರೆ ಎನ್ನುವುದು ಅಲ್ಲ. ಸರ್ಕಾರಿ ಸಂಸ್ಥೆಯವರು ನಡೆಸಬೇಕಾದಾಗ ನಿಗದಿಯಾದ ಲಾಭದ ಪ್ರಶ್ನೆ ಇರಬೇಕು. ರೈತರ ಶೋಷಣೆಯನ್ನು ತಪ್ಪಿಸಲಿಕ್ಕೆ ಸರ್ಕಾರಿ ಸಂಸ್ಥೆ ಯಾವ ರೀತಿ ನಡೆದುಕೊಳ್ಳುತ್ತಿದೆ ಎನ್ನುವುದನ್ನು ತಾವು ನೋಡಬೇಕು ವ್ಯಾಪಾರಿ ಸಂಸ್ಥೆಗಳು, ಬೇರೆಯವರು ಮಾರುವುದನ್ನು ಗಣನೆಗೆ ತೆಗೆದುಕೊಂಡು ಹೇಳುವುದಕ್ಕೆ ಹೋಗ ಬಾರದು. ಈಗ ನೀವು ಖರೀದಿ ಮಾಡತಕ್ಕ ಬೆಲೆ ಮತ್ತು ಮಾರಾಟ ಮಾಡತಕ್ಕ ಬೆಲೆ ವ್ಯತ್ಯಾಸ ಏನಿದೆ ಇದನ್ನೂ ಗಮನದಲ್ಲಿಟ್ಟುಕೊಂಡು ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರು ಕೇಳುವುದರಲ್ಲಿ ಅರ್ಥ ಇದೆ. ನಾನೂ ನೋಡಿದ್ದೇನೆ.

ಶ್ರೀ ಆರ್. ವಿ. ದೇಶಪಾಂಡೆ.— ಅಧ್ಯಕ್ಷರೆ, ನಾನು ಒಪ್ಪುತ್ತೇನೆ. ಇದು ರೈತರ ಸಂಸ್ಥೆ ಇದರಲ್ಲಿ ಎರಡು ಜನ ಏನಿದ್ದರು, ಅಲ್ಲಿ ನಾಲ್ಕು ಜನರನ್ನು ಮಾಡಿದ್ದೇವೆ. ರೈತರಿಗೆ ಸರಿಯಾದ ಸಮಯದಲ್ಲಿ ಯೋಗ್ಯ ದರದಲ್ಲಿ ವಿತರಣೆ ಮಾಡುವ ಜವಾಬ್ದಾರಿ ಈ ಸಂಸ್ಥೆಯದು. ನಾನು ಆಗಲೇ ಹೇಳಿದ್ದೇನೆ, ಇದರ ಬಗ್ಗೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ಗೆ ಹೇಳಿದ್ದೇವೆಂದು. ಅವರು ಸ್ಟಡಿ ಮಾಡುತ್ತಿದ್ದಾರೆ.

೨ ಕನಕಪುರ ತಾಲ್ಲೂಕು ಹೊರಳಗಲ್ಲುನಲ್ಲಿ ಮಂಜೂರಾಗಿರುವ ದರಖಾಸ್ತು ಭೂಮಿಯನ್ನು ಸ್ವಾಧೀನಕ್ಕೆ ಕೊಡಿಸುವುದರ ಬಗ್ಗೆ

ಶ್ರೀ ಬಿ. ಗುರುಪ್ರಸಾದ್.— ಮಾನ್ಯ ಅಧ್ಯಕ್ಷರೇ, ಕನಕಪುರ ತಾಲ್ಲೂಕು ಹೊರಳಗಲ್ಲು ಸ. ನಂ. ೧೭೯ ರಲ್ಲಿ ಮಂಜೂರಾಗಿರುವ ದರಖಾಸ್ತು ಭೂಮಿಯ ಅಳತೆ ಮತ್ತು ಸ್ವಾಧೀನ ಕೊಡಿಸುವ ಬಗೆ ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕನಕಪುರ ತಾಲ್ಲೂಕಿನಲ್ಲಿ ಕಸಬಾ ಹೋಬಳಿ ಹೊರಳಗಲ್ಲು ಗ್ರಾಮದ ಸರ್ವೆ ನಂ. ೧೭೯ ರಲ್ಲಿ ಕೆಳಿ ಬಗರು ಹುಕುಂ ಸಾಗುವಳಿದಾರರಿಗೆ ದರಖಾಸ್ತು ಕಡತವನ್ನು ೧೯೮೩–೪೪ ರಲ್ಲಿ ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ ೧೦೫ ಎಲ್‌ಜಿಸಿ ೭೯, ದಿನಾಂಕ ೧೯–೧೯೭೭, (೨) ಆರ್‌ಡಿ ೧೬ ಎಲ್‌ಜಿಸಿ ೭೯ (ಪಿ) ದಿನಾಂಕ ೧೬–೧೦–೧೯೭೯ ಆರ್‌ಡಿ ೨೭ ಎಲ್‌ಜಿಪಿ ೮೧ ದಿನಾಂಕ